


## ಲ್ಯಾಕ್ಮೆ ಅಬ್ಸೊಲ್ಯೂಟ್

ಸೌಂದರ್ಯವರ್ಧಕ ಉತ್ಪನ್ನಗಳ ತಯಾರಿಕಾ ಸಂಸ್ಥೆ ಲ್ಯಾಕ್ಮೆ ಇದೀಗ ಅಬ್ಸೊಲ್ಯೂಟ್ ಸರಣಿಯಲ್ಲಿ ಸ್ಕಿನ್ ಕ್ಲೀನರ್ ಹೊರತಂದಿದೆ.

ಚರ್ಮದ ರಕ್ಷಣೆಯ ಜೊತೆಗೆ ಇದು ಮಾಯಿಶ್ಚರೈಸಿಂಗ್ ಕೂಡಾ ಮಾಡುತ್ತದೆ.

ನಯವಾದ ಆರೋಗ್ಯಕರ ಚರ್ಮವನ್ನು ಹೊಂದಲು ಇದು ಸಹಕಾರಿ, ಅಲ್ಲದೆ ಚರ್ಮವನ್ನು ಸದಾಕಾಲ ಹೊಳಪಿನಿಂದ ಕೂಡಿರುವಂತೆ ಮಾಡುತ್ತದೆ ಎಂದು ಕಂಪೆನಿ ಹೇಳಿದೆ.

ಮಾಹಿತಿಗೆ: 9742896807

www.lakmeindia.com




## ಒರಿಫ್ಲೇಮ್ ಲಿಪ್‌ಗ್ಲಾಸ್




ತುಟಿಗಳ ಸೌಂದರ್ಯದ ಬಗ್ಗೆ ಕಾಳಜಿ ವಹಿಸುವವರಿಗಾಗಿ ಒರಿಫ್ಲೇಮ್ ವನ್ ಕಲರ್ ಲಿಪ್‌ಗ್ಲಾಸ್ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ತುಟಿಯನ್ನು ಮೃದುವಾಗಿಡಲು ಇದು ಸಹಕಾರಿ, ಒಮ್ಮೆ ಹಚ್ಚಿಕೊಂಡರೆ 6 ಗಂಟೆಗಳ ಕಾಲ ಇದರ ಹೊಳಪು ತಾಜಾ ಆಗಿ ಉಳಿಯುತ್ತದೆ. 5 ಆಕರ್ಷಕ ಬಣ್ಣಗಳಲ್ಲಿ ಇದು ದೊರೆಯುತ್ತದೆ ಎಂದು ಕಂಪೆನಿ ಹೇಳಿದೆ.

ಬೆಲೆ 449 ರೂಪಾಯಿ.

ವಿವರಗಳಿಗೆ: www.oriflame.co.in



## ಫ್ಯಾಬ್ ಅಲಿ ಕನ್ನಡಕ

ಯುವತಿಯರ ನೆಚ್ಚಿನ ಫ್ಯಾಷನ್ ಬ್ರಾಂಡ್ ಫ್ಯಾಬ್ ಅಲಿ ಇದೀಗ ತನ್ನ ಐವೇರ್ ಸರಣಿಯಲ್ಲಿ ಹೊಸ ಸಂಗ್ರಹ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ವಿವಿಧ ಮಾದರಿಯ ವಿನ್ಯಾಸಗಳು, ಏವಿಯೇಟರ್, ರೌಂಡ್ ಫ್ರೇಂ, ವೇಫರರ್ ಮಾದರಿಗಳು ಈ ಸಂಗ್ರಹದಲ್ಲಿವೆ.

ಆಕರ್ಷಕ ಬಣ್ಣಗಳ ಲೆನ್ಸ್‌ಗಳು ಇದರಲ್ಲಿ ಲಭ್ಯವಿದ್ದು, ಮ್ಯಾಚಿಂಗ್ ಬಯಸುವವರಿಗೆ ಇದು ಉತ್ತಮ ಆಯ್ಕೆ ಎಂದು ಕಂಪೆನಿ ಹೇಳಿದೆ. ಧೂಳು ಮತ್ತು ಬಿಸಿಲಿನಿಂದ ಕಣ್ಣುಗಳನ್ನು ರಕ್ಷಿಸಲು ಇದು ಸಹಕಾರಿ.

ಬೆಲೆ 1100 ರೂಪಾಯಿಗಳಿಂದ ಆರಂಭ.

ಮಾಹಿತಿಗೆ: 8190250541

## ಧಾರ ಸನ್‌ಫ್ಲವರ್

ಮದರ್ ಡೈರಿ ಸಂಸ್ಥೆಯು ಅಡುಗೆಯ ರುಚಿ ಹೆಚ್ಚಿಸಲು ಧಾರ ಸನ್‌ಫ್ಲವರ್ ಎಣ್ಣೆಯನ್ನು ಹೊರತಂದಿದೆ. ನೈಸರ್ಗಿಕ ಸೂರ್ಯಕಾಂತಿಯಿಂದ ಇದನ್ನು ತಯಾರಿಸಿದ್ದು, ಆರೋಗ್ಯಕ್ಕೆ ಉತ್ತಮ.




ಇದನ್ನು ಬಳಸಿ ತಯಾರಿಸಿದ ಅಡುಗೆಯಿಂದ ಯಾವುದೇ ರೀತಿಯ ಕೊಬ್ಬು ಬರುವುದಿಲ್ಲ ಎಂದು ಕಂಪೆನಿ ಹೇಳಿದೆ.

ಶುದ್ಧ ಮತ್ತು ತಾಜಾ ಎಣ್ಣೆ ಬಯಸುವವರಿಗೆ ಇದು ಉತ್ತಮ ಆಯ್ಕೆ, ಇದರಲ್ಲಿ ವಿಟಮಿನ್ ಎ ಮತ್ತು ಡಿ2 ಅಂಶವಿದೆ.

1 ಲೀಟರ್‌ನ ಪ್ಯಾಕ್ ಮತ್ತು 5 ಲೀಟರ್ ಕ್ಯಾನ್‌ನಲ್ಲಿ ಇದು ಲಭ್ಯ.

ಮಾಹಿತಿಗೆ: 09711306385

## ನೋಕಿಯ 105




ಮೊಬೈಲ್ ಉತ್ಪಾದನೆಗೆ ಪ್ರಸಿದ್ಧವಾದ ನೋಕಿಯ ಸಂಸ್ಥೆ ಸ್ಮಾರ್ಟ್‌ಫೋನ್ ಭರಾಟೆಯ ನಡುವೆಯೂ ಬೇಸಿಕ್ ಫೋನ್ ನೋಕಿಯ 105 ಮಾದರಿಯನ್ನು ಪರಿಚಯಿಸಿದೆ.

ಎಫ್‌ಎಂ ರೇಡಿಯೊ, ಫ್ಲ್ಯಾಶ್ ಲೈಟ್ ಮತ್ತು ಎರಡು ಸಿಮ್ ಹಾಕುವ ಸೌಲಭ್ಯ ಇದರಲ್ಲಿದೆ.

ಮೂರು ಬಣ್ಣಗಳಲ್ಲಿ ಈ ಮಾದರಿ ದೊರೆಯುತ್ತದೆ.

ಬೆಲೆ 999 ರೂಪಾಯಿಗಳು.

ವಿವರಗಳಿಗೆ: www.microsoft.com

## ಎಲ್‌ಜಿ ಜಿ4

ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕೆಗೆ ಪ್ರಸಿದ್ಧವಾದ ಎಲ್‌ಜಿ ತನ್ನ ಸ್ಮಾರ್ಟ್‌ಫೋನ್ ಸರಣಿಯಲ್ಲಿ ಜಿ4 ಮಾದರಿ ಪರಿಚಯಿಸಿದೆ.




16 ಮೆಗಾಪಿಕ್ಸೆಲ್ ಹಿಂಬದಿ ಕ್ಯಾಮೆರಾ, 8 ಮೆಗಾಪಿಕ್ಸೆಲ್ ಸೆಲ್ಫಿ ಇದರಲ್ಲಿದೆ.

5.5 ಇಂಚಿನ ತೆರೆ, 4ಜಿ ಸಂಪರ್ಕ, 3ಜಿಬಿ ರ್‍ಯಾಮ್ ಮತ್ತು 32 ಜಿಬಿ ಮೆಮೊರಿ ಇದರ ವಿಶೇಷ. 3000 ಎಂಎಹೆಚ್ ಬ್ಯಾಟರಿ ಹೊಂದಿದೆ.

ಬೆಲೆ 49,999 ರೂಪಾಯಿಗಳು. ವಿವರಗಳಿಗೆ: www.lg.com